


- ಜನವರಿ ಸಂಚಿಕೆ ಆಕರ್ಷಕ ಕತೆಗಳು, ಅರ್ಥಪೂರ್ಣ ಸಂದರ್ಶನ, ವಿವೇಚನಾಶೀಲ ಬರಹಗಳಿಂದ ಮನಕ್ಕೆ ಮುದ ನೀಡಿತು. ವಿಕ್ರಂ ವಿಸಾಜಿ ಅವರು ಮಾಡಿರುವ ವಿಮರ್ಶಕ ಬಸವರಾಜ ಕಲ್ಗುಡಿ ಅವರ ಸಂದರ್ಶನ 'ಸೂಕ್ಷ್ಮಜ್ಞರನ್ನು ಬೆಳೆಸುವುದು ಸಂಸ್ಕೃತಿಯ ಜವಾಬ್ದಾರಿ' ಸಕಾಲಿಕವಾಗಿತ್ತು.

**ಸುವರ್ಣ ಮಠ, ವಿಜಯಪುರ**

- ಎಚ್.ಎಸ್. ರಾಘವೇಂದ್ರ ರಾವ್ ಅವರ ಲೇಖನ 'ನಮ್ಮ ಕಾಲದ ಸಮಸ್ಯೆಗಳು ಮತ್ತು ಪಂಪ' ಮೌಲಿಕವಾಗಿದೆ. ಪ್ರೀತಿ ನಾಗರಾಜ ಅವರ ಪ್ರಬಂಧ 'ತಮಸೋಮಾ ಜ್ಯೋತಿರ್ಗಮಯ' ವೈನೋದಿಕ ಶೈಲಿಯಿಂದ ಓದಿಸಿಕೊಳ್ಳುತ್ತದೆ.

**ಜ್ಯೋತಿ ಪರಬತ್, ಹುಬ್ಬಳ್ಳಿ**

- ರಾಘವೇಂದ್ರ ರಾವ್ ಅವರ ಲೇಖನದ ವಿಚಾರಧಾರೆ ಅರ್ಥಪೂರ್ಣವಾಗಿದೆ. ವಿಭಿನ್ನ ಶೈಲಿಯ ಕತೆ, ಪ್ರಬಂಧ, ಲೇಖನಗಳಿಂದ ಈ ಸಂಚಿಕೆ ಸಮೃದ್ಧವಾಗಿದೆ.

**ಅಮೃತೇಶ್ವರ ತಂಡರ, ಅಣ್ಣಿಗೇರಿ**

- ಪ್ರಭಾಕರ ಶಿಶಿಲ ಅವರ ಕತೆ 'ತಮಿಳು ಅಜ್ಜನ ಕ್ರಾಂತಿ' ಮೇಲ್ನೋಟಕ್ಕೆ ದ್ರಾವಿಡ ತಮಿಳು ಕುಟುಂಬದ ಕತೆಯಂತೆ ಕಂಡರೂ, ಶ್ರೀಲಂಕಾದ ಪೌರಾಣಿಕ, ಐತಿಹಾಸಿಕ ಹಿನ್ನೆಲೆಯನ್ನು ಬಿಚ್ಚಿಡುತ್ತದೆ. ಸಿಂಹಳೀಯರು ಮತ್ತು ತಮಿಳು ಈಳಂಗಳ ನಡುವೆ ದಶಕಗಳ ಕಾಲ ಜರುಗಿದ ಭೀಕರ ರಕ್ತಸಿಕ್ತ ಕದನದ ಚರಿತ್ರೆಯನ್ನು ಇದು ಅನಾವರಣಗೊಳಿಸುವ ಬಗೆ ಅನನ್ಯವಾಗಿದೆ.

**ಎಂ.ಜಿ.ರಂಗಸ್ವಾಮಿ, ಹಿರಿಯೂರು**

- ದೀಪಾ ಫಡ್ಕೆ ಅವರ 'ಅತಿ ಚರಾಮಿ' ಕತೆ ಹಿಡಿಸಿತು. ಮದುವೆಗೂ ಮುನ್ನ ದೊಡ್ಡ ಕನಸು ಹೊತ್ತು ಬಂದ ಸತ್ಯಭಾಮಳ ಕತೆ ಮನಕದಡುವಂತಿದೆ.

**ಸಾವಿತ್ರಿ ಶ್ಯಾನುಭಾಗ್, ಕುಂದಾಪುರ**

- ಅನುವಾದಕರ ಪ್ರಶ್ನೋತ್ತರಗಳ ಮಾಲೆ 'ಭಾಷಾಂತರ: ಎಲ್ಲ ದಿಕ್ಕುಗಳ ಗಾಳಿ–ಬೆಳಕು' ಭಾಷಾಂತರ ಲೋಕದ ವಿಶಿಷ್ಟ ಒಳಸುಳಿಗಳನ್ನು ಸೂಕ್ಷ್ಮವಾಗಿ ಕಾಣಿಸುತ್ತದೆ.

**ಸತ್ಯಭಾಮಾ ಎಂ., ತಿಪಟೂರು**

- ಕೆ.ವಿ. ರಾಜಲಕ್ಷ್ಮಿ ಅವರ 'ಲಾಸ್ಟ್ ಬೆಂಚ್ ಹುಡುಗಿ' ಹಾಗೂ ಆದರ್ಶ್ ವಿಜಯಲಕ್ಷ್ಮಿ ಅವರ 'ಒಂದು ವಾಚಿನ ಪ್ರಸಂಗ' ಕತೆಗಳು ಸರಳ ನಿರೂಪಣೆಯಿಂದ ಗಮನ ಸೆಳೆದವು.

**ಗಿರೀಶ ವೈ.ಜಿ., ತುಮಕೂರು**

- ವಿಭಿನ್ನ ವಿಚಾರಗಳನ್ನು ಸರಳವಾಗಿ ನಿರೂಪಿಸುತ್ತ, ನಮ್ಮ ಸುತ್ತಲು ನಡೆಯುವ, ನಮ್ಮ ಗಮನಕ್ಕೆ ಬಾರದ ಅಪರೂಪದ ಸಂಗತಿಗಳಿಗೆ ಮಾತಿನ ರೂಪ ನೀಡುತ್ತಿರುವ ಕರ್ಕಿ ಕೃಷ್ಣಮೂರ್ತಿ ಅವರ ಅಂಕಣ 'ಇಮೋಜಿ ಭಾಷೆ' ಅಕ್ಷರ ಲೋಕವನ್ನು ವಿಸ್ತರಿಸುತ್ತಿದೆ.

**ರಾಜಲಕ್ಷ್ಮಿ, ಬೆಂಗಳೂರು**